ಸದರಿ ಮಾರ್ಗಗಳಲ್ಲಿ ಸುಖಾಸೀನ ಬಸ್ಸುಗಳನ್ನು ಓಡಾಡಿಸಬೇಕಾದಲ್ಲಿ ಸದರೀ ರಾಜ್ಯಗಳ ಸಾರಿಗೆ ಸಂಸ್ಥೆಗಳು ಒಂದು ಒಪ್ಪಂದಕ್ಕೆ ಬಂದು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ನಂತರದಲ್ಲಿ ಮೋಟಾರು ವಾಹನ ಕಾಯಿದೆ ಪ್ರಕಾರ ಒಂದು ಒಪ್ಪಂದಕ್ಕೆ ಬಂದನಂತರ ಓಡಾಡಿಸಲು ಸಾಧ್ಯವಾಗುತ್ತದೆ. ಈ ಸಂಬಂಧದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಆಂಧ್ರ ಮತ್ತು ಮಹಾರಾಷ್ಟ್ರ ಸಾರಿಗೆ ಸಂಸ್ಥೆಗಳೊಡನೆ ಚರ್ಚಿಸಿ ಒಪ್ಪಂದಕ್ಕೆ ಬರಲು ಸೂಚನೆ ನೀಡಲಾಗುವುದು.

ಈ ದಿಸೆಯಲ್ಲಿ ಸಾರಿಗೆ ಸಂಸ್ಥೆಗೆ ಸೂಕ್ತ ನಿರ್ದೇಶನವನ್ನು ನೀಡಲಾಗುವುದು. ಮತ್ತು ರಾಜ್ಯ ಸರಕಾರವೂ ಸಹ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ಸರ್ಕಾರಗಳೊಡನೆ ಒಂದು ಒಪ್ಪಂದಕ್ಕೆ ಬರಲು ಚರ್ಚೆಯನ್ನು ಕೈಗೊಳ್ಳಲಾಗುವುದು.

೧೫೫ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯಂ ಹತ್ತಿರ ನದಿಗಳ ಪ್ರವಾಹವನ್ನು ತಡೆಯಲು ತಡೆಗೋಡೆಗಳನ್ನು ನಿರ್ಮಿಸುವುದು

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಪಟ್ಟಣವು ಹಿಂದೆ ತಾಲ್ಲೂಕು ಕೇಂದ್ರ ಸ್ಥಳವಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುರಾತನ ಪುಣ್ಯ ಕ್ಷೇತ್ರಗಳಾದ ಧರ್ಮಸ್ಥಳ ಹಾಗೂ ಸುಬ್ರಹ್ಮಣ್ಯಕ್ಕೆ ಭಕ್ತಯಾತ್ರಿಗಳು ಹಾದು ಹೋಗುವ, ಕೇಂದ್ರ ಸ್ಥಳವಾದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನದಿಗಳಾದ ಕುಮಾರಧಾರ ಹಾಗೂ ನೇತ್ರಾವತಿ ನದಿಯು ಸಂಗಮವಾಗುವ ಪುಣ್ಯ ಸ್ಥಳವಾದ ಈ ಪಟ್ಟಣಕ್ಕೆ ದಕ್ಷಿಣ ಕಾಶಿ ಎಂದೂ ಕೂಡಾ ಕರೆಯಲಾಗುತ್ತಿದೆ. ಮಂತ್ತು ಈ ಉಪ್ಪಿನಂಗಡಿ ಪಟ್ಟಣವು ನೆರೆ ಹೊರೆಯ ನದಿ ದಂಡೆಯಲ್ಲಿದ್ದು ಪ್ರಮುಖವಾದ ಒಂದು ವ್ಯಾಪಾರ ಕೇಂದ್ರ ಕೂಡ ಆಗಿದೆ. ಪಾಗೂ ಬೇರೆ ಬೇರೆ, ಸರಕಾರಿ ಇಲಾಖೆಗಳಿರುವ ಒಂದು ಕೇಂದ್ರ ಸ್ಥಳವು ಕೂಡ ಆಗಿರುವುದು. ಆದರೆ ಇಲ್ಲಿ ಇರುವ ಪ್ರಮುಖವಾದ ಒಂದು ತೊಂದರೆ ಎಂದರೆ, ಈ ನೇತ್ರಾವತಿ ಹಾಗೂ ಕುಮಾರ ಧಾರ ನದಿಗಳಲ್ಲಿ ಮಳೆಗಾಲದಲ್ಲಿ ನೆರೆಯಿಂದ ಪ್ರವಾಹ ಬಂದು ಈ ಪೇಟೆ ಪಟ್ಟಣಕ್ಕೂ ನುಗ್ಗಿಲ್ಲಿಂದ ಜನರಿಗೂ ತುಂಬಾ ತೊಂದರೆಯಾಗಿರುವುದು. ಈ ಪ್ರವಾಹವನ್ನು ತಡೆಗಟ್ಟಲು ಈ ನದಿಯ ದಂಡೆಗೆ ತಡೆಗೋಡೆಗಳನ್ನು ನಿರ್ಮಿಸಿ, ಇಲ್ಲಿಯ ನಿವಾಸಿಗಳಿಗೂ, ಯಾತ್ರಾರ್ಥಿಗಳಿಗೂ ರಕ್ಷಣೆಯನ್ನಾಗಿ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಉತ್ತರವನ್ನು ತರಿಸಿಕೊಡುತ್ತೇನೆ.

ಬ್ರಹ್ಮಾವರದ ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕರ ಕಚೇರಿಯು ದಿನಾಂಕ ೯-೫-೮೮ರಂದು ಮುನ್ಸೂಚನೆ ಇಲ್ಲದೆ ಮುಚ್ಚಿರುವುದು

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೆ, ಬ್ರಹ್ಮಾವರದ ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕರ ಕಛೇರಿಗೆ ಗ್ರಾಮಾಂತರ ಪ್ರದೇಶಗಳಿಂದ ನಾನಾ ಕೆಲಸಗಳಿಗಾಗಿ ರೈತಾಪಿ ಜನರು ಬರುತ್ತಿದ್ದುದು ಸಹಜ. ಆದರೆ ಕಳೆದ ೯ನೇ ದಿನಾಂಕದಿಂದ ಸದರೆ ಇಲಾಖೆಯ ಬಾಗಿಲು ತೆರೆಯದೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ರೈತರಿಗೆ ಇದರಿಂದ ತೊಂದರೆಯಾಗಿದೆ. ಅಲ್ಲದೆ ಇದೇ ಕಛೇರಿಯಲ್ಲಿರುವ ಚಾಂತಾರು ಮಠಪಾಡಿಗೆ ಸಂಬಂಧಿಸಿದ ಗ್ರಾಮಕರಣಿಕರೂ ಕಛೇರಿಗೆ ಬರದಿರುವುದರಿಂದಾಗಿ ಗ್ರಾಮಸ್ಥರಿಗೆ ತೊಂದರೆಯಾಗಿರುವುದಾಗಿ ದೂರಲಾಗಿದ್ದು, ಈ ರೀತಿ ಕಂದಾಯ ಇಲಾಖೆಯ ಬಾಗಿಲನ್ನು ಮುನ್ಸೂಚನೆ ನೀಡದೆ ಮುಚ್ಚಿದ್ದು ಜನಗಳಿಗೆ ತೊಂದರೆಯಾಗಿರುವುದಕ್ಕೆ ಕಾರಣವೇನೆಂಬ ಬಗ್ಗೆ ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರಕಾರ ಯಾವ ಕ್ರಮ ಕೈಗೊಂಡಿದೆ ಎಂಬ ಬಗ್ಗೆಯೂ ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಂದಾಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಬ್ರಹ್ಮಾವರದ ರಾಜಸ್ವ ನಿರೀಕ್ಷಕರು ಬ್ರಹ್ಮಾವರದ ಕಂದಾಯ ಫಿರ್ಕಾದ ೨೯ ಕಂದಾಯ ಗ್ರಾಮಗಳ ಕೆಲಸವನ್ನು

ನೋಡಿಕೊಳ್ಳಬೇಕಾಗಿರುವುದರಿಂದ ಅವರು ಪ್ರತಿದಿನ ತಮ್ಮ ಕಛೇರಿಯಲ್ಲಿ ಇರುವುದು ಅಸಾಧ್ಯ. ಅದೂ ಅಲ್ಲದೆ ತಮ್ಮ ಪ್ರತಿ ತಿಂಗಳ ಪ್ರವಾಸಕಾರ್ಯಕ್ರಮವನ್ನು ತಿಂಗಳ ಮೊದಲ ವಾರದಲ್ಲಿಯೇ ಮಾಡಿಕೊಂಡಿದ್ದು, ಅದರಂತೆ ದಿನಾಂಕ ೯-೫-೮೮ರಂದು ಉಪ್ಪೂರು ಗ್ರಾಮದ ಪ್ರವಾಸ ಕಾರ್ಯಕ್ರಮವನ್ನು ನಮೂದಿಸಿ ಅದರಂತೆ ಪ್ರವಾಸ ಕೈಗೊಂಡಿರುತ್ತಾರೆ. ದಿನಾಂಕ ೧೦-೫-೮೮ ರಿಂದ ೧೩-೫-೮೮ರವರೆಗೆ ಬ್ರಹ್ಮಾವರದ ಫಿರ್ಕಾ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ್ದು ಗ್ರಾಮ ಕರಣಿಕರ ಸಭೆಯಲ್ಲಿ ಸಹ ಭಾಗವಹಿಸಿ ದಿನಾಂಕ ೧೩-೫-೮೮ರ ಅಪರಾಹ್ನ ಕಛೇರಿಯಲ್ಲಿಯೇ ಇದ್ದುದ್ದು ತಿಳಿದು ಬಂದಿದೆ.

ಚಾಂತಾರು, ಮಂಡಪಾಡಿ ಗ್ರಾಮಕರಣಿಕರು ದಿನಾಂಕ ೯-೫-೮೮ರ ಮತ್ತು ೧೦-೫-೮೮ರಂದು 'ಸಾಂದರ್ಭಿಕ ರಜೆ' ಮೇಲಿದ್ದುದರಿಂದ ಕಚೇರಿಗೆ ಹಾಜರಾಗಲಿಲ್ಲ. ದಿನಾಂಕ ೧೧-೫-೮೮ರ ಮತ್ತು ೧೨-೫-೮೮ರರಂದು ಹೆಚ್ಚಿನ ಪ್ರಭಾರದಲ್ಲಿದ್ದ ಕೋಟಾ ಫಿರ್ಕಾದ ಕಾರ್ಕಡ ಗ್ರಾಮಕರಣಿಕರ ವಲಯದಲ್ಲಿ ಕಾರ್ಯನಿರತರಾಗಿದ್ದುದರಿಂದ ಮೇಲ್ಕಾಣಿಸಿದ ಇಬ್ಬರೂ ಅಧಿಕಾರಿಗಳು ದಿನಾಂಕ ೯-೫-೮೮ರರಂದು ಕಚೇರಿಗೆ ಹಾಜರಾಗದೇ ಇದ್ದುದು ಸಹಜವೂ, ಸಮರ್ಪಕವೂ ಆಗಿದೆ.

ಸದರಿ ಅಧಿಕಾರಿಗಳ ಗೈರುಹಾಜರಿಯಿಂದ ಗ್ರಾಮಸ್ಥರಿಗೆ ತೊಂದರೆಯಾದ ಬಗ್ಗೆ ಉಡುಪಿ ತಾಲ್ಲೂಕು ಕಚೇರಿಗೆ ಯಾವ ದೂರೂ ಬಂದಿರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಆಗಿರಬಹುದಾದ ಅನಾನುಕೂಲಕ್ಕೆ ವಿಷಾದಿಸಲಾಗಿದೆ.

17) ರಾಜ್ಯದಲ್ಲಿರುವ ಸ್ಟೆನೋಟೈಪಿಸ್ಟರಿ ಪದವೀಧರರಿಗೆ ಗರಿಷ್ಠ ವಯೋಮಿತಿ ನಿರ್ಬಂಧವನ್ನು ತೆಗೆದು ಹಾಕುವುದು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಸ್ಟೆನೋಟೈಪಿಸ್ಟರ ಪದವೀಧರರಲ್ಲಿ ಈಗಾಗಲೇ ಬಹು ಮಂದಿ ಸರ್ಕಾರವು ನೀಡಿರುವ ಗರಿಷ್ಠ ವಯೋಮಿತಿ (೧೮ ವರ್ಷಗಳು) ರಿಯಾಯಿತಿಯನ್ನು ಮೀರಿರುತ್ತಾರೆ. ಮತ್ತು ಮೀರಿರುತ್ತಲೂ ಇದ್ದಾರೆ. ಈ ಹಿಂದೆ ಸ್ಟೆನೋಟೈಪಿಸ್ಟರ ಪದವೀಧರ ಸಂಘವು ವಯೋಮಿತಿಯ ನಿರ್ಬಂಧವನ್ನು ತೆಗೆದುಹಾಕಿ ಸಂಪೂರ್ಣ ರಿಯಾಯಿತಿ ನೀಡಬೇಕೆಂದು ವಿನಂತಿಸಿಕೊಂಡಿತ್ತು. ಸರ್ಕಾರ ಯಾವುದೇ ನಿರ್ಧಾರ ಕೈಗೊಳ್ಳದ ಪರಿಣಾಮ ನೇಮಕಾತಿ ಮಾಡುವಾಗ ಅವರುಗಳಿಗೆ ಕೆಲಸಕ್ಕೆ ಸೇರಲು ಅನರ್ಹತೆಯಾಗಿ ಅವರಿಗೆ ಅನ್ಯಾಯವಾಗಿದೆ.

ಆದ್ದರಿಂದ ಸ್ಟೆನೋಟೈಪಿಸ್ಟರ ಪದವೀಧರರನ್ನು ಕೆಲಸಕ್ಕೆ ನೇಮಕ ಮಾಡುವಾಗ ಈಗ ಇರುವ ಗರಿಷ್ಠ ವಯೋಮಿತಿಯನ್ನು ತೆಗೆದುಹಾಕಿ ಸಂಪೂರ್ಣ ರಿಯಾಯಿತಿ ನೀಡಿ ಜೇಷ್ಠತಾ ಪಟ್ಟಿಯಲ್ಲಿರುವ ಎಲ್ಲಾ ಸ್ಟೆನೋಟೈಪಿಸ್ಟರ ಪದವೀಧರರಿಗೂ ಕೆಲಸ ದೊರೆಯುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಖಾತೆ ಸಚಿವರು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಸ್ಟೆನೋಟೈಪಿಸ್ಟರ ಪದವೀಧರರ ಯೋಜನೆಯು ಡಿಸೆಂಬರ್ ೧೯೭೭ರಲ್ಲಿ ಪ್ರಾರಂಭಿಸಲ್ಪಟ್ಟಿತ್ತು. ಅಲ್ಲಿಂದೀಚೆಗೆ ಸುಮಾರು ಹದಿನಾಲ್ಕು ಸಾವಿರ ಸ್ಟೆನೋಟೈಪಿಸ್ಟರ ಪದವೀಧರರನ್ನು ನೇಮಿಸಿಕೊಳ್ಳಲಾಯಿತು. ಆದರೆ ಇದುವರೆವಿಗೆ ಸರ್ಕಾರಿ ನೌಕರಿಯಲ್ಲಿ ಸಕ್ರಮ ನೇಮಕಾತಿ ದೊರೆಯದೆ ಸುಮಾರು ೭೪೦೦ ಸ್ಟೆನೋಟೈಪಿಸ್ಟರ ಪದವೀಧರರು ಇನ್ನೂ ಉಳಿದುಕೊಂಡಿದ್ದಾರೆ.

ಸ್ಟೆನೋಟೈಪಿಸ್ಟರ ಪದವೀಧರರನ್ನು ಸರ್ಕಾರಿ ನೌಕರಿಯಲ್ಲಿ ಸಕ್ರಮ ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ ಸರ್ಕಾರ ಆಗಾಗ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಬಂದಿದೆ.